MVC No. 185/2012 PW-1

<u>ದಿನಾಂಕ **21.09.2023** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಎದುರುದಾರರಾದ ಆರ್ **2** ಪರ ಶ್ರೀ ಕೆ ಟಿ ಟಿ ವಕೀಲರಿಂದಃ</u>

ಕುದ್ರತ್ ಉಲ್ಲಾ ಶರೀಫ್ ನನ್ನ ಅಣ್ಣ. ಮಹಜರ್ ಮಾಡುವ ಕಾಲದಲ್ಲಿ ನನ್ನ ಅಣ್ಣ ಟ್ಯಾಕ್ಟರ್ ವಾಹನದ ನೊಂದಣಿ ಸಂಖ್ಯೆ ಕೆಎ 42-ಟಿ -1233 ಎಂದು ಹೇಳಿರುತ್ತಾರೆ. ನನ್ನ ಅಣ್ಣ ದೂರು ನೀಡಿದ ನಂತರ ಪೋಲಿಸರು ಸದರಿ ವಾಹನವಾದ ಕೆಎ-42-ಟಿ-1233 ರ ವಾಹನವನ್ನು ನಿಪಿ-6 ರಂತೆ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಪೋಲಿಸರು ಕೆಎ 42-ಟಿ -1234 ರ ಟ್ರಾಕ್ಟರ್ ಮತ್ತು ಕೆಎ 40-ಟಿ -3969 ರ ಟ್ರೈಲರ್ ಅನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆಂದರೆ ಸುಳ್ಳು. 2 ನೇ ಎದುರುದಾರರು ಸುಶೀಲಮ್ಮನವರು ಈ ಮೇಲೆ ಹೇಳಿದ ಕೆಎ 42-ಟಿ -1234 ರ ಟ್ರಾಕ್ಟರ್ ಮತ್ತು ಕೆಎ 40-ಟಿ -3969 ರ ಟ್ರೈಲರ್ ನನಗೆ ಸಂಬಂದಪಟ್ಟಿದ್ದು ಎಂದು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆಂದರೆ ಸುಳ್ಳು. ಪೋಲಿಸರು ನಾನು ಹೋಗುತ್ತಿದ್ದ ಕೆಎ-02-ಆರ್ 2488 ರ ದ್ವಿಚಕ್ರ ವಾಹನವನ್ನು ನಿಪಿ8 ರ ಪ್ರಕಾರ ಅಮಾನತ್ತು ಪಡಿಸಿ ಕೊಂಡಿರುತ್ತಾರೆ. ಸದರಿ ದ್ವಿಚಕ್ರ ವಾಹನ ಸಂಬಂದಪಟ್ಟಂತೆ ಐ ಎಂ ವಿ ವರದಿಯನ್ನು ನಾನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಸದರಿ ದ್ವಿಚಕ್ರ ವಾಹನಕ್ಕೆ ಸಂಬಂಪಟ್ಟಂತೆ ನಾನು ಐ ಎಂ ವಿ ವರದಿಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಕಾರ ಸದರಿ ದ್ವಿಚಕ್ರ ವಾಹನಕ್ಕೆ ಏನೆಲ್ಲಾ ಜಖಂಗಳು ಆಗಿತ್ತು ಎಂದು ನನಗೆ ಗೊತ್ತಿಲ್ಲ ನನ್ನ ಸಹೋದರನಿಗೆ ಗೊತ್ತು. ನಾನು ಪೋಲಿಸರ ಮುಂದೆ ನಿಪಿ-12 ರಂತೆ ಹೇಳಿಕೆಯನ್ನು ನೀಡಿರುತ್ತೇನೆ. ನಿಪಿ-12 ರಲ್ಲಿ ನನ್ನ ದ್ವಿಚಕ್ರ ವಾಹನದ ಸಂಖ್ಯೆ ಮತ್ತು ಕೆಎ-42-ಟಿ-1233 ರ ವಾಹನದ ಸಂಖ್ಯೆ ಮಾತ್ರ ನಮೂದಿಸಲಾಗಿದೆ ಎಂದರೆ ಹೌದು. ನಾನು ಸದರಿ ಅಪಘಾತವಾದಸ್ಥಳದಲ್ಲಿ ಸದರಿ ಕೆಎ-42-ಟಿ-1233 ರ ಈ ನೊಂದಣಿ ಸಂಖ್ಯೆಯನ್ನು ನಾನು ನೋಡಿದ ಆಧಾರದ ಮೇರೆಗೆ ಪೋಲಿಸರ ಮುಂದೆ ಹೇಳಿರುತ್ತೇನೆ. ಸದರಿ ಅಪಘಾತದಿಂದ ನನ್ನ ಬಲಗೈ ಊತ ಮತ್ತು ಸ್ವಲ್ಪ ಸೊಟ್ಟ ಆಗಿತ್ತು ಇದನ್ನು ಹೊರತುಪಡಿಸಿ ಬೇರೆ ಯಾವುದೇ ಗಾಯಗಳು ಆಗಿರುವುದಿಲ್ಲ ಎಂದರೆ ಸಾಕ್ಷಿ

ಆಗಿತ್ತು ಎಂದು ನುಡಿಯುತ್ತಾರೆ. ನನಗೆ ತರಚಿದ ಗಾಯಗಳು ಆಗಿತ್ತು. ಸದರಿ ಗಾಯಗಳನ್ನು ಆಸ್ಪತ್ರೆಯಲ್ಲಿ ತೋರಿಸಿರುತ್ತೇನೆ. ವೈದ್ಯರು ನೀಡಿದ ಗಾಯದ ಪ್ರಮಾಣ ಪತ್ರದ ಪ್ರಕಾರ ಅಂದರೆ ನಿಪಿ10 ರ ಪ್ರಕಾರ ನನ್ನ ಬಲಗೈ ಊತ ಮತ್ತು ಸ್ವಲ್ಪ ಸೊಟ್ಟ ಆಗಿತ್ತು ಎಂದು ಮಾತ್ರ ನಮೂದು ಮಾಡಿರುತ್ತಾರೆಂದರೆ ಸರಿಯಲ್ಲ. ನಾನು ವೆಲ್ಡಿಂಗ್ ಕೆಲಸ ಮಾಡುತ್ತಿದ್ದೆ. ನಾನು ವೆಲ್ಡಿಂಡ್ ಕೆಲಸ ಮಾಡುವಾಗ ಬಿದ್ದು ನನ್ನ ಬಲಗೈ ಗಾಯ ಮಾಡಿಕೊಂಡು ನನ್ನ ಅಣ್ಣನ ಜೊತೆ ಸೇರಿ ಸುಳ್ಳು ದೂರನ್ನು ನೀಡಿರುತ್ತೇನೆಂದರೆ ಸರಿಯಲ್ಲ. 2 ನೇ ಎದುರುದಾರರ ವಾಹನ ಯಾವುದೇ ಅಪಘಾತದಲ್ಲಿ ಭಾಗಿಯಾಗಿಲ್ಲ ಆದ್ದರಿಂದ ಅವರು ಯಾವುದೇ ಪರಿಹಾರ ಕೊಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಎದುರುದಾರರಾದ ಆರ್ 3 ಪರ ವಕೀಲರಿಂದಃ</u>

ಆರ್ 3 (ಬಿ) ಪರ ವಕೀಲರು ಸಮಯಾವಾಕ ಕೋರಿದ್ದು, ಆರ್ 3 (ಬಿ) ಪರ ವಕೀಲರು ಯಾವುದೇ ಲಿಖಿತ ಹೇಳಿಕೆಯನ್ನು ಸಲ್ಲಿಸದ ಕಾರಣ ಮತ್ತು ಈ ಪ್ರಕರಣವು 2012 ರ ಪ್ರಕರಣವಾಗಿದ್ದು ಯಾವುದೇ ಸಕಾಲವಿಲ್ಲದ ಕಾರಣ ಮನವಿಯನ್ನು ತಿರಸ್ಕರಿಸಿ ಪಾಟೀ ಸವಾಲನ್ನು ಇಲ್ಲವೆಂದು ತೆಗೆದುಕೊಳ್ಳಲಾಯಿತು.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

(ಶುಭಾ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.